Regd No B G 155

(164) 6-9-1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ತೇದಾರ್ ಎಂ ವಿ ಸುಬ್ಬರಾಯರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಹುಚ್ಚಾಸ್ಪತ್ರೆಗೆ

ಕಳಿಸಿದ ಗಡಿಯಾರ

ಗ್ರೀನಿಚ್ (ಡಾಡ್) — ಎಲ್ಲಾ ಗಡಿಯಾರಗಳ ಹಾಗೆ ಅದು ಕೇವಲ ಗಂಟೆಯನ್ನೋ ತಾರೀಖನ್ನೋ ತೋರಿಸುವುದಿಲ್ಲ; ಸೂರ್ಯ ಚಂದ್ರ ನಕ್ಷತ್ರಗಳ ಗತಿ, ಕಾಲ, ಯಾನ ಕ್ಷಣ, ನಿಮಿಷ, ಗಂಟೆ, ದಿನ, ತಿಂಗಳು, ಋತುಗಳು ವರ್ಷಗಳು, ಇವಿಷ್ಟನ್ನೂ ತೋರಿಸುತ್ತದೆ ಆ ಗಡಿಯಾರ; ಜೋಸೆಫ್ ಗ್ರೇಸ್ ಎಂಬಾತನಿಗೆ ಅನನ್ಯಸದೃಶವಾದೊಂದು ಗಡಿಯಾರವನ್ನು ತಯಾರಿಸಬೇಕೆಂಬ ಹಂಬಲ. ಅವನ ಅಣ್ಣನಿಗೆ ಅದು ಅಷ್ಟು ಇಷ್ಟವಿಲ್ಲ: ಆದರೂ ಬೇರೆ ಮಾರ್ಗವಿಲ್ಲದೆ, ತಮ್ಮನನ್ನು ಒಂದು ಕೋಣೆಯಲ್ಲಿ ಕೂಡಿಹಾಕಿ ಅವನಿಗೆ ಗಡಿಯಾರ ತಯಾರಿಸಲು ಬೇಕಾದ ಸಾಮಗ್ರಿಗಳನ್ನೆಲ್ಲಾ ಒದಗಿಸಿಕೊಡುತ್ತಾ ಬಂದ; ಆರು ವರ್ಷಗಳಲ್ಲಿ ಗಡಿಯಾರದ ತಯಾರಿಕೆ ಮುಗಿದಾಗ, ಗಡಿಯಾರವನ್ನೂ ತಮ್ಮನನ್ನೂ ಹೊರಗೆ ಕರೆತಂದಾಗ, ತಮ್ಮ 'ಆ ಹಾ ಹಾ' ಎಂದು ಗಟ್ಟಿಯಾಗಿ ನಕ್ಕು ಕಿರುಚಾಡಿದ; ಪರೀಕ್ಷಿಸಿದಾಗ ಹುಚ್ಚು ಹಿಡಿದು ಬಿಟ್ಟಿತ್ತು. ಎಂಟು ವರ್ಷಗಳ ಕಾಲ ಹುಚ್ಚಾಸ್ಪತ್ರೆಯಲ್ಲಿದ್ದು ಮೃತಪಟ್ಟ. ಆತನ ಅಪೂರ್ವ ಗಡಿಯಾರ ಈಚೆಗೆ ಶತಮಾನೋತ್ಸವ ಆಚರಿಸಿತು (ಯು ಪಿ ಎಸ್)

ಪ್ರಧಾನಿಗಳ ನಿರ್ಧಾರ

ನವದೆಹಲಿ — ಪಾಕಿಸ್ಥಾನವು ಮೊದಲ ತನ್ನ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಪ್ರಧಾನಿ ಶಾಸ್ತ್ರಿಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಿದ್ದಾರೆ.

⁂

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ವಿದ್ವಾನ್ ಧರ್ಮಾಧಿಕಾರಿ
ರಾಜಶಾಸ್ತ್ರಾಧ್ಯಾಪಕ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

7 ಮಂಗಳವಾರ ದ್ವಾದಶಿ ಉತ್ತರಾಷಾಢ

ವಾರ್ತಾ ವಿಶೇಷಗಳು

ನವದೆಹಲಿ— ಈ ವರ್ಷ ರಾಷ್ಟ್ರೀಯ ಪಾರಿತೋಷಕವು 89 ಉಪಾಧ್ಯಾಯರಿಗೆ ಕೊಡಲಾಗಿದೆ.

*

ಬೆಂಗಳೂರು— ರಾಜ್ಯದ ಮಂತ್ರಿಮಂಡಲ ಸಭೆಯು ಶನಿವಾರ ನಡೆದು ಪಾಕಿಸ್ಥಾನದ ಆಕ್ರಮಣ ಬಗ್ಗೆ ಚರ್ಚಿಸಿ ಪ್ರಧಾನಿಗಳ ಕರೆಗಿದ್ದಂತೆ ಹಲವು ನಿರ್ಧಾರ ಮಾಡಿತು.

⁂

ಖಟ್ಮಂಡು— ಕಾಶ್ಮೀರದಲ್ಲಿ ಶಾಂತಿ ನೆಲೆಸುವುದಕ್ಕಾಗಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳು ಮಾಡಿರುವ ಮನವಿಯನ್ನು ನೇಪಾಳ ಬೆಂಬಲಿಸಿದೆ

*

ಶ್ರೀನಗರ— ನಿಲ್ಲಿಸಲ್ಪಟ್ಟಿರುವ ಹರಿಯಾತ್-ಪತ್ರಿಕೆಯ ಸಂಪಾದಕರೂ ಮತ್ತು ಅವಾಮಿ ಲೀಗಿನ ನಾಯಕರೂ ಆದ ಅಹಮದುಲ್ಲಾರವರನ್ನು ಭಾರತ ರಕ್ಷಣಾ ವಿಧಿ ಮೇರೆ ಬಂಧಿಸಲಾಗಿದೆ

* * *

ನವದೆಹಲಿ — ಪಾಕಿಸ್ಥಾನಿ ವಿಮಾನಗಳು ಹಾಕಿದ ಬಾಂಬುಗಳು ಅವರ ಪ್ರದೇಶದಲ್ಲೇ ಬಿದ್ದವು

*

ವಾಷಿಂಗ್ಟನ್— ಕಾಶ್ಮೀರದಲ್ಲಿ ಭಾರತ-ಪಾಕ್ ಕದನವು ಅಮೆರಿಕಾ ಅಧ್ಯಕ್ಷ ಜಾನ್ಸನ್ನರಿಗೆ ತುಂಬಾ ಚಿಂತೆಯುಂಟುಮಾಡಿದೆ

ಪಂಜಾಬಿ ಸುಭಾ

ನವದೆಹಲಿ— ಪಂಜಾಬಿ ಸುಭಾಕ್ಕಾಗಿ ಫತೇಸಿಂಗ್ ಉಪವಾಸದ ಬೆದರಿಕೆ ಬಗ್ಗೆ ಗೃಹಮಂತ್ರಿ ನಂದಾರವರು ಪಂಜಾಬು ನಾಯಕರೊಡನೆ ಮಾತುಕತೆ ನಡೆಸಿದರು — ಸಿಖ್ ಶಾಸಕರು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರೊಡನೆ ಮಾತುಕತೆ ನಡೆಸಿದರು.

ಪಾಕಿಸ್ತಾನಕ್ಕೆ ರೂ. 2000 ಕೋಟಿ ಅಮೇರಿಕಾದ ಮಿಲಿಟರಿ ನೆರವು

ನವದೆಹಲಿ— ಅಮೇರಿಕಾವು ಪಾಕಿಸ್ಥಾನಕ್ಕೆ ಇಲ್ಲಿಯವರೆಗೆ ರೂ 2000 ಕೋಟಿ ಮೌಲ್ಯದ ಮಿಲಿಟರಿ ನೆರವನ್ನು ಕೊಟ್ಟಿದೆ; ಇದರಲ್ಲಿ 170 ಪ್ಯಾಟನ್ ಟ್ಯಾಂಕುಗಳೂ, ಎಫ್ 104 ವಿಮಾನಗಳೂ, ರೇಡಾರ್ ಸಲಕರಣೆಗಳೂ ಸೇರಿವೆ

*

ರಷ್ಯಾದ ನಿಲುವು ಹಿಂದಿನಂತೆಯೇ

ಮಾಸ್ಕೋ— ಕಾಶ್ಮೀರದ ವಿಷಯದಲ್ಲಿ ತನ್ನ ಹಿಂದಿನ ನಿಲುವನ್ನೇ ರಷ್ಯಾ ಸಮರ್ಥಿಸುವುದೆಂದು ತಿಳಿಸಿದೆ ಮತ್ತು ಭಾರತದೊಡನೆಯ ತನ್ನ ಮೈತ್ರಿಯನ್ನು ದೃಢೀಕರಿಸಿದೆ

⁂

ಪಾಕಿಸ್ಥಾನ ಕಳೆದುಕೊಳ್ಳುವುದು

ಲಂಡನ್— ಭಾರತದ ಮೇಲೆ ಪಾಕಿಸ್ಥಾನ ಗೆಲ್ಲಲಾರದೆಂದೂ ಎರಡು ದೇಶಗಳಲ್ಲೂ ಬಿಡಾಬಿಡಿ ಯುದ್ಧವಾದರೆ ಪಾಕಿಸ್ಥಾನ ಕಳೆದುಕೊಳ್ಳುವುದೆಂದೂ ಎಕನಾಮಿಸ್ಟ್ ಪತ್ರಿಕೆ ಬರೆದಿದೆ.

⁂

ವಿಶ್ವಸಂಸ್ಥೆ ಪ್ರತಿದಿನ ಖರ್ಚಿಗೆ ಸಾಲ

ನ್ಯೂಯಾರ್ಕ್ — ವಿಶ್ವಸಂಸ್ಥೆಯ ಆರ್ಥಿಕ ಪರಿಸ್ಥಿತಿ ಸರಿಪಡಿಸಲು 110 ಮಿಲಿಯ ಡಾಲರುಗಳು ಅವಶ್ಯಕವೆಂದೂ ಪ್ರಧಾನ ಕಾರ್ಯದರ್ಶಿ ಥಾಂಟರು ಹೇಳಿದರು — ಈ ತಿಂಗಳ ಪ್ರತಿದಿನದ ಖರ್ಚಿಗಾಗಿ ಸಾಲ ಮಾಡಲು ನಿರೀಕ್ಷಿಸಿದ್ದಾರೆ

⁂

ನವದೆಹಲಿ— ಪಾಕಿಸ್ಥಾನಿ ವಿಮಾನಗಳು ಮಸೀದಿ ಮೇಲೆ ಬಾಂಬು ಮಾಡಿದ್ದನ್ನು ಪ್ರಧಾನಿ ಶಾಸ್ತ್ರಿಗಳು ಖಂಡಿಸಿದರು.

ಪ್ರಮುಖ ವಾರ್ತೆಗಳು

ಕದನ ವಿರಾಮವನ್ನು ಪಾಕಿಸ್ಥಾನ ಒತ್ತಾಯ ಮಾಡಲು ಅವಕಾಶವಿಲ್ಲವೆಂದು ಪ್ರಧಾನಿಯವರು ತಿಳಿಸಿದ್ದಾರೆ

⁂

ಪಾಕಿಸ್ಥಾನದ ಆಕ್ರಮಣವನ್ನು ಎದುರಿಸುವುದಾಗಿ ಡಾ|| ರಾಧಾಕೃಷ್ಣನ್ ತಿಳಿಸಿದ್ದಾರೆ

ಕಾಶ್ಮೀರ ಕದನ ವಿರಾಮ ಆದ್ಯಂತ ಹೊಡೆದಾಟ ನಡೆಯುತ್ತಿದೆ.

ಉಪಾಧ್ಯಾಯರ ನಿವೃತ್ತಿ ವಯಸ್ಸು ಅರವತ್ತಕ್ಕೆ ಏರಬೇಕೆಂದು ಶಿಫಾರಸು ಆಗಿದೆ.

ಉಪಾಧ್ಯಾಯರ ವೇತನ ಹೆಚ್ಚುವಂತೆ ಜ|| ಹೆಗ್ಡೆ ತಿಳಿಸಿದರು

ಪಾಕಿಸ್ಥಾನದ ತಪ್ಪಿತ

ವಿಶ್ವಸಂಸ್ಥೆ— ಕಾಶ್ಮೀರದಲ್ಲಿನ ಕದನಕ್ಕಾಗಿ ಪ್ರಧಾನ ಕಾರ್ಯದರ್ಶಿ ಥಾಂಟರು ಪಾಕಿಸ್ಥಾನವನ್ನು ನಿಂದಿಸಿರುವರು — ಅಲ್ಲಿಯ ಪರಿಸ್ಥಿತಿಗೆ ಪಾಕಿಸ್ಥಾನದ ಮೇಲೆ ಜವಾಬ್ದಾರಿ ಹಾಕಿರುವರು — ಪಾಕಿಸ್ಥಾನವು ಕದನ ವಿರಾಮ ಒಪ್ಪಂದದಂತೆ ಭರವಸೆ ಕೊಡಲು ನಿರಾಕರಿಸಿದೆ.

* * *

ಬಾಂಬರು ಕೆಡವಿದ ವೀರ

ಬೊಂಬಾಯಿ— ಪಾಕಿಸ್ಥಾನಿ ಬಾಂಬರನ್ನು ಶನಿವಾರ ಹೊಡೆದುರುಳಿಸಿದ ಕೀಲರರಿಗೆ ರೂ 501 ಪಾರಿತೋಷಕ ಕೊಡಲಾಗಿದೆ — ಮತ್ತು ಈತನ ಧೈರ್ಯ ಸಾಮರ್ಥ್ಯಕ್ಕಾಗಿ ವಾಯು ಸೇನಾ ಮೆಡಲೂ ಕೊಡಲಾಗಿದೆ.

"ಅವಳು" ಹೇಗಿದ್ದರೆ ಚೆನ್ನ !

☆

ಹೆಣ್ಣು ಹೇಗಿರಬೇಕು ಎಂದು ನಮ್ಮ ಹಿರಿಯರೂ ಕವಿಗಳೂ ಹಲವಾರು ರೀತಿಗಳಲ್ಲಿ ವರ್ಣಿಸಿದ್ದಾರೆ : ರಂಗುರಂಗಿನ ಉಡಿಗೆತೊಡಿಗೆಗಳಿಂದ ಅಲಂಕೃತಳಾಗಿ ಹಾಸಿಗೆಯಲ್ಲಿ ನೆಮ್ಮದಿಯನ್ನು ನೀಡುವುದು ಮಾತ್ರ ಹೆಂಡತಿಯ ಕಾರ್ಯವಲ್ಲವೆಂದೂ, ಅವಳು ಸಂದರ್ಭ ಬಿದ್ದಾಗ, ದಾಸಿಯಂತೆ, ತಾಯಿಯಂತೆ, ಸ್ನೇಹಿತೆಯಂತೆ ವರ್ತಿಸಬೇಕೆಂದೂ ಹೇಳಿದ್ದಾರೆ ; ಆದರೆ ಸರ್ವಗುಣ ಸಂಪನ್ನೆಯಾದ ಅಂತಹ ಸ್ತ್ರೀಯನ್ನು ಹೆಚ್ಚಾಗಿ ಕಲ್ಪನೆಯಲ್ಲಿ ಕಾಣಬಹುದೇ ವಿನಹಾ ನಿಜಜೀವನದಲ್ಲಿ ಕಾಣುವುದು ಬಹಳ ಅಪರೂಪ.

ಪಶ್ಚಿಮ ಬರ್ಲಿನ್ (ಡಾಡ್)— ಅಂತಹವಳನ್ನು ಕಾಣಬಹುದು ಚಿತ್ರಗಳಲ್ಲಿ ಮಾತ್ರ ! ಪಶ್ಚಿಮ ಜರ್ಮನಿಯ ವ್ಯಾಪಾರಿಗಳು ಮುಟ್ಟಿದ್ದಕ್ಕೆಲ್ಲಾ ಹೆಣ್ಣಿನ ಚಿತ್ರಗಳನ್ನೇ ತಮ್ಮ ಜಾಹಿರಾತುಗಳಲ್ಲಿ ಬಳಸಲಾರಂಭಿಸಿದ್ದಾರೆ

ಅಂತಹ ಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆಯು ಜರ್ಮನಿಯ ಆದರ್ಶ ಮಹಿಳೆಯಂತಿರುತ್ತಾಳೆ ; ಅವಳ ದೇಹ ಕೋಮಲವಾಗಿರುತ್ತದೆ, ಮುಖದಲ್ಲಿ ಮಂದಹಾಸ ತಿಳಿಯಾಗಿ ಬೆಳಗುತ್ತಿರುತ್ತದೆ, ಸ್ತ್ರೀತ್ವದ ಪೂರ್ಣ ಲಕ್ಷಣಗಳು ಅವಳ ಕಣ್ಣುಗಳಿಂದ ಸೂಸುತ್ತಿರುತ್ತದೆ

ಜರ್ಮನರು ಬಯಸುವ ಆದರ್ಶ ಹೆಣ್ಣು ಹೇಗಿರಬೇಕು ? ಚಲಚಿತ್ರತಾರೆಯಂತೆಯೆ ? ನನ್ನ ಕಾಲು ಮೇಲೆ ನಾನು ನಿಲ್ಲಬಲ್ಲೆ ಎಂಬ ಅಹಂಕಾರದಿಂದ ಕೂಡಿದವಳಾಗಿಯೇ ? ಸ್ವತಂತ್ರವಾಗಿ ವ್ಯಾಪಾರದಲ್ಲಿ ತೊಡಗಬಲ್ಲಂತವಳಾಗಿಯೇ ? .... ಅಥವಾ ಹಿಂದಿನ ಕಾಲದ ಪತಿಯೇ ದೈವ ಎನ್ನುವಂತವಳಾಗಿಯೇ ?— ಇದೊಂದೂ ಅಲ್ಲ ; ಅವಳು ಸಹಾನುಭೂತಿಯುಳ್ಳವಳಾಗಿರಬೇಕು ! ಸೌಂದರ್ಯ ಸಾಧನದ ಮೋಹದಿಂದ ಕೂಡಿರದೆ ಅವಳ ಲಾವಣ್ಯ ಸಾಧ್ಯವಾದಷ್ಟೂ ಸಹಜವಾದುದೂ ಆಗಿರಬೇಕು .... ಸುಶಿಕ್ಷಿತಳಾಗಿರಬೇಕು, ಗಂಡನಿಗೆ ನೆರವಾದ ಸಂಗಾತಿಯಾಗಿರಬೇಕು, ಉತ್ತಮ ತಾಯಿಯಾಗಿರಬೇಕು ! ಒಂದೇ, ಎರಡೇ ? (ಯು ಪಿ ಎಸ್)

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ



ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು
ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ,
ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 ; (ಒಂದು ಸಾರಿ ಮಾತ್ರ)

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ನೀವು ಇದುವರೆಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ
ನೋಡಿ ಆನಂದಿಸಿ

ಭೂತ್ ಬಂಗ್ಲ (ಹಿಂದಿ) Bhoot Bangla

ಮಹಮೂದ್, ತನುಜ, ನಾಜಿರ್ ಹುಸೇನ್, ಅಸಿತ್ ಸೇನ್ ನಾನಾಪಾಲ್ ಸಿಕರ್
ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಜನಭರಿತ 2 ನೇ ವಾರ

❀ ವೀರ ಅಭಿಮನ್ಯು (ತೆಲುಗು) ❀

ಪಾತ್ರ— ಎನ್ ಟಿ ರಾಮರಾವ್, ಕಾಂಚನ, ಕಾಂತಾರಾವ್, ರಾಜನಾಳ
ಪದ್ಮನಾಭಂ, ಶೋಭನ್‌ಬಾಬು, ಜಿ ವರಲಕ್ಷ್ಮಿ | ದಿನ 3 ಆಟಗಳು

SHAKTI

SUDHA

❀

A Superb Tonic

❀ Protect the Cow ❀

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharma pracharo nlratha
M S Krishna Rao (Proprietor) at the Satyavadi Press
Chamarajapuram, Mysore 4